ತನ್ನೊಂದಿಗೆ ಅಲ್ಲಿಗೆ ಕರೆತಂದಳು. ಮದನಾ ಸಿಂಗ್ ಅವರನ್ನು ಟೇಪಚೂ ಬಿದ್ದ ಸ್ಥಳಕ್ಕೆ ಕರೆದೊಯ್ದು, ತಾನೂ ದಂಗಾದ. ಈ ಮೊದಲು ತಾಳೆ ಮರದ ಕೆಳಗೆ ಟೇಪಚೂನ ಶವವಿತ್ತಲ್ಲ? ತಾನು ಸೇಂದಿಯ ನಶೆಯಲ್ಲಿ ಕನಸು ಕಂಡಿಲ್ಲ ತಾನೇ? ಒಡೆದ ಮಡಿಕೆ ಇನ್ನೂ ಅಲ್ಲಿಯೇ ಬಿದ್ದಿತ್ತು. ಹಾವಿನ ತಲೆಯನ್ನು ಯಾರೋ ಕಲ್ಲಿನ ತುಂಡಿನಿಂದ ಜಜ್ಜಿದ್ದರು. ಆದರೆ ಟೇಪಚೂನ ಸುಳಿವಿರಲಿಲ್ಲ. ಸುತ್ತಮುತ್ತ ಹುಡುಕಿದರೂ ಟೇಪಚೂ ಕಾಣ ಬರಲಿಲ್ಲ.

ಹಳ್ಳಿಯ ಜನರಿಗೆ, ಬೇವರ್ಸಿ ಟೇಪಚೂ ಎಂದೂ ಸಾಯಲಾರ ಎಂದು ಅನ್ನಿಸಿತು.

ಫಿರೋಜಾಳ ಆರೋಗ್ಯ ಒಂದೇ ಸಮನೆ ಬಿಗಡಾಯಿಸುತ್ತಿತ್ತು. ಕತ್ತಿನ ಎರಡೂ ಕಡೆಯ ಎಲುಬುಗಳು ಉಬ್ಬಿದ್ದವು. ಸ್ತನಗಳು ಬಾಡಿ ಖಾಲಿ ಚೀಲಗಳಂತೆ ಜೋತಾಡುತ್ತಿದ್ದವು. ಪಕ್ಕೆಲುಬುಗಳನ್ನು ಎಣಿಸಬಹುದಿತ್ತು. ಅವಳು ಟೇಪಚೂನನ್ನು ತುಂಬಾ ಪ್ರೀತಿಸುತ್ತಿದ್ದಳು. ಅವನಿಗಾಗಿಯೇ ಅವಳು ಇನ್ನೊಂದು ನಿಕಾಹ ಮಾಡಿಕೊಂಡಿರಲಿಲ್ಲ.

ಟೇಪಚೂನ ಚೇಷ್ಟೆಗಳಿಂದಾಗಿ ಫಿರೋಜಾಳಿಗೆ, ಅವನು ಅಲೆಮಾರಿಯಾದರೆ ಎಂಬ ಭಯ ಕಾಡಿತು. ಹೀಗಾಗಿ, ಅವಳು ಅದೊಂದು ದಿನ ಹಳ್ಳಿಯ ಪಂಡಿತ ಭಗವಾನದೀನರ ಕಾಲುಗಳನ್ನು ಹಿಡಿದಳು. ಪಂಡಿತ ಭಗವಾನದೀನರ ಮನೆಯಲ್ಲಿ ಎರಡು ಎಮ್ಮೆಗಳಿದ್ದು, ವ್ಯವಸಾಯದೊಂದಿಗೆ ಹಾಲಿನ ವ್ಯಾಪಾರವನ್ನೂ ಮಾಡುತ್ತಿದ್ದರು. ಅವರಿಗೆ ದನ ಮೇಯಿಸುವವನ ಅಗತ್ಯವಿತ್ತು. ಇದಕ್ಕಾಗಿ ತಿಂಗಳಿಗೆ ಹದಿನೈದು ರೂಪಾಯಿ ಸಂಬಳ ಮತ್ತು ಊಟ-ತಿಂಡಿ ಸಮೇತ ಟೇಪಚೂವನ್ನು ನೇಮಿಸಿಕೊಳ್ಳಲಾಯಿತು. ಭಗವಾನದೀನರು ತುಂಬಾ ದುಷ್ಟರಾಗಿದ್ದರು. ಊಟ-ತಿಂಡಿಯ ಹೆಸರಿನಲ್ಲಿ ರಾತ್ರಿ ಉಳಿದ ಅನ್ನ ಅಥವಾ ಮೆಕ್ಕೆ ಜೋಳದ ಸುಟ್ಟ ರೊಟ್ಟಿಗಳು ಟೇಪಚೂಗೆ ಸಿಗುತ್ತಿದ್ದವು. ಎಮ್ಮೆಗಳನ್ನು ಮಾತ್ರ ನೋಡಿಕೊಳ್ಳುವುದು ಎಂದು ಒಪ್ಪಂದವಾಗಿದ್ದರೂ, ಎಮ್ಮೆಗಳೊಂದಿಗೆ ಪಂಡಿತರ ಮನೆಯಿಂದ ಹಿಡಿದು ಹೊಲದ ಎಲ್ಲಾ ಕೆಲಸ-ಕಾರ್ಯಗಳನ್ನೂ ಮಾಡಬೇಕಿತ್ತು. ಬೆಳಗ್ಗೆ ನಾಲ್ಕು ಗಂಟೆಗೆ ಅವನನ್ನು ಎಬ್ಬಿಸಲಾಗುತ್ತಿತ್ತು, ರಾತ್ರಿ ಮಲಗುವಾಗ ಹನ್ನೆರಡು ಗಂಟೆಯಾಗುತ್ತಿತ್ತು. ಒಂದು ತಿಂಗಳಿನಲ್ಲಿಯೇ ಟೇಪಚೂನ ಆರೋಗ್ಯ ಬಿಗಡಾಯಿಸಿತು, ಇದನ್ನು ಕಂಡು ಫಿರೋಜಾ ಕರಗಿದಳು. ಗಟ್ಟಿಯಾಗಿ ಮನಸಾರೆ ಅತ್ತಳು. ಅವಳು ಟೇಪಚೂಗೆ, 'ಮಗಾ, ಈ ಪಂಡಿತನ ಮನೆಯ ಬಾಗಿಲಿಗೆ ಹೋಗಬೇಡ. ಬೇರೆ ನೋಡೋಣ. ಇವನು ಶುದ್ಧ ಕಟುಕ' ಎಂದಳು. ಆದರೆ, ಟೇಪಚೂ ಅವಳ ಮಾತನ್ನು ಅಲ್ಲಗೆಳೆದ.

ಟೇಪಚೂ ಇಲ್ಲಿಯೂ ಕೆಲಸ ಹುಡುಕಿಕೊಂಡ. ಎಮ್ಮೆಗಳನ್ನು ಕಾಡಿಗೆ ಹೊಡೆದುಕೊಂಡು ಹೋಗಿ, ಅವುಗಳನ್ನು ಸ್ವತಂತ್ರವಾಗಿ ಬಿಟ್ಟು, ರಾತ್ರಿಯ ನಿದ್ರೆಯನ್ನು ಮರವೊಂದರ ಕೆಳಗೆ ಮಲಗಿ ಪೂರೈಸಿಕೊಳ್ಳುತ್ತಿದ್ದ. ನಂತರ ಎದ್ದು, ಸೋನ್ ನದಿಯಲ್ಲಿ ಎಮ್ಮೆಗಳಿಗೆ ಸ್ನಾನ ಮಾಡಿಸುತ್ತಿದ್ದ. ಬಾಯಿ ಮುಕ್ಕಳಿಸಿ, ನಂತರ ಅತ್ತ-ಇತ್ತ ಗಮನಿಸಿ ಡಾಲ್ಡದ ಖಾಲಿ ಡಬ್ಬಿಯಲ್ಲಿ ಎಮ್ಮೆಯ ಒಂದು ಲೀಟರ್ ತಾಜಾ ಹಾಲನ್ನು ಕರೆದು ಕುಡಿಯುತ್ತಿದ್ದ. ಕ್ರಮೇಣ ಅವನ ಆರೋಗ್ಯ ಸುಧಾರಿಸಿತು.

ಒಮ್ಮೆ ಪಂಡಿತರ ಹೆಂಡತಿ ಅವನನ್ನು ಯಾವುದೋ ಒಂದು ವಿಷಯಕ್ಕೆ ಹಳಿದು, ಅವನಿಗೆ ತಿನ್ನಲು ಹಳಸಿದ ಅನ್ನವನ್ನು ಕೊಟ್ಟಳು. ಅಂದು ಟೇಪಚೂ ಹೊಲಕ್ಕೆ ನೀರು ಹಾಯಿಸುವ ಕೆಲಸವನ್ನೂ ಮಾಡಬೇಕಿತ್ತು. ದಣಿವು ಮತ್ತು ಹಸಿವೆಯಿಂದ ಕಳವಳಗೊಂಡಿದ್ದ ಅವನು ಅನ್ನವನ್ನು ಬಾಯಿಗೆ ಇಡುತ್ತಲೇ ಕೆಟ್ಟ ವಾಸನೆಯಿಂದಾಗಿ ವಾಂತಿ ಬಂತು. ಅನ್ನವನ್ನು ಎಮ್ಮೆಗಳಿಗೆ ನೀರು ಉಣಿಸುವ ತೊಟ್ಟಿಗೆ ಹಾಕಿ, ಎಮ್ಮೆಗಳನ್ನು ಕಾಡಿಗೆ ಹೊಡೆದುಕೊಂಡು ಹೋದ.

ಸಂಜೆ ಎಮ್ಮೆಯ ಕೆಚ್ಚಲಿಗೆ ಕೈಹಾಕಿ ಹಾಲು ಕರೆದರೆ, ಒಂದು ಚಟಾಕು ಹಾಲು ಸಹ ಬರಲಿಲ್ಲ. ಪಂಡಿತ ಭಗವಾನದೀನರಿಗೆ ಅನುಮಾನ ಬಂತು, ಅವರು ಟೇಪಚೂಗೆ ಚಪ್ಪಲಿಗಳಿಂದ ಹೊಡೆದರು. ತುಂಬಾ ಹೊತ್ತು, ಕಿವಿಹಿಡಿದು ಕೂರಿಸಿದರು. ಗೋಡೆಯ ಬಳಿ ಕುಕ್ಕುರಗಾಲಿನಲ್ಲಿ ಕೂರಿಸಿದರು, ನಂತರ ಅವನನ್ನು ಕೆಲಸದಿಂದ ತೆಗೆದರು.

ನಂತರ ಟೇಪಚೂ ಪಿ.ಡಬ್ಲ್ಯೂ.ಡಿ.ಯಲ್ಲಿ ಕೆಲಸ ಮಾಡಲಾರಂಭಿಸಿದ. ಬೂದಿ, ಜಲ್ಲಿಕಲ್ಲು ಇತ್ಯಾದಿಗಳನ್ನು ರಸ್ತೆಗೆ ಹಾಕುವ ಕೆಲಸ ಅಂದರೆ ಡಾಂಬರ್ ಹಾಕುವ ಕೆಲಸವನ್ನು ಮಾಡಿದ. ಇದು ದೊಡ್ಡ-ದೊಡ್ಡ ಗಂಡಾಳುಗಳು, ಮಟ-ಮಟ ಬಿಸಿಲಿನಲ್ಲಿ ಮಾಡುವ ಕೆಲಸವಾಗಿತ್ತು. ಫಿರೋಜಾ